# ಪ್ಲೇ ಸ್ಟೋರ್ ಮ್ಯಾನೇಜ್‌ಮೆಂಟ್ ಫೆಸ್ಟ್ ಉದ್ಘಾಟನೆ




ಕಾರ್ಕಳ, ಮಾ. 25: ಮ್ಯಾನೇಜ್ ಮೆಂಟ್ ಫೆಸ್ಟ್‌ಗಳು ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಗಳನ್ನು ಕ್ರೀಯಾಶೀಲರನ್ನಾಗಿ ಸುತ್ತವೆ. ಸ್ಪರ್ಧೆ ಎನ್ನುವುದು ಕೇವಲ ಸೋಲು-ಗೆಲುವಿನ ಲೆಕ್ಕಾಚಾರಲ್ಲ, ಅದೊಂದು ಅಪೂರ್ವ ಅವಕಾಶದ ಹಾದಿ ಯೆಂದು ನಿಟ್ಟೆ ಕಾಲೇಜಿನ ಉಪನ್ಯಾಸಕ ಡಾ। ರಾಧಾಕೃಷ್ಣ ಶರ್ಮಾ ಹೇಳಿದರು.

ಮಾ. 25ರಂದು ಮಂಜುನಾಥ ಪೈ ಸ್ಮಾರಕ ಪ್ರಥಮದರ್ಜೆ ಕಾಲೇಜಿನ ಎಂ.ಕಾಂ. ಸ್ನಾತಕೋತ್ತರ ವಿಭಾಗದ ವತಿ ಯಿಂದ ಹಮ್ಮಿಕೊಂಡ ರಾಜ್ಯಮಟ್ಟದ ಪ್ಲೇ ಸ್ಟೋರ್' ಮ್ಯಾನೇಜ್‌ಮೆಂಟ್ ಫೆಸ್ಟ್ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ಔದ್ಯೋಗಿಕ ಜಗತ್ತಲ್ಲಿ ಉದ್ಯೋಗ ಗಳಿಕೆಗೆ ಅಂಕಗಳೇ ಮಾನ ದಂಡ ವಾಗಿ ಉಳಿದಿಲ್ಲ, ಅಂಕಗಳಿಕೆ ಗಿಂತಲೂ ಹೆಚ್ಚಾಗಿ ಜೀವನ ಕೌಶಲಗಳು, ಕ್ರಿಯಾ ಶೀಲತೆಯೇ ಮುಖ್ಯವಾಗಿದೆ. ಮ್ಯಾನೇಜ್ ಮೆಂಟ್ ಜಗತ್ತಲ್ಲಿ ವ್ಯವಹಾರ ಮೌಲ್ಯಗಳಿಗೂ ಮಹತ್ವವಿದೆ. ವಿದ್ಯಾರ್ಥಿ ಗಳು ಮ್ಯಾನೇಜ್‌ಮೆಂಟ್ ಕ್ಷೇತ್ರಕ್ಕೆ ಬೇಕಾದ ಕೌಶಲಗಳನ್ನು ವಿದ್ಯಾರ್ಥಿದೆಸೆಯಲ್ಲಿಯೇ ರೂಢಿಸಿ ಕೊಳ್ಳಬೇಕು ಎಂದು ಹೇಳಿದರು. ವಾಣಿಜ್ಯ ವಿಭಾಗದ ಮುಖ್ಯಸ್ಥೆ ಜ್ಯೋತಿ ಎಲ್. ಜನ್ನೆ ಉಪಸ್ಥಿತರಿದ್ದರು.

ಕಾಲೇಜಿನ ಪ್ರಾಂಶುಪಾಲ ಪ್ರೊ। ಶ್ರೀವರ್ಮ ಅಜ್ರಿ ಅಧ್ಯಕ್ಷತೆ ವಹಿಸಿದ್ದರು. ಸ್ನಾತಕೋತ್ತರ ಎಂ.ಕಾಂ. ವಿಭಾಗದ ಮುಖ್ಯಸ್ಥ, ಕಾರ್ಯಕ್ರಮ ಸಂಯೋಜಕ ಪ್ರೊ। ವಿದ್ಯಾಧರ ಹೆಗ್ಡೆ ಪ್ರಾಸ್ತಾವಿಸಿದರು. ಸ್ನಾತಕೋತ್ತರ ವಿಭಾಗದ ಪ್ರಾಧ್ಯಾಪಕ ಮಂಜುನಾಥ್ ಸ್ವಾಗತಿಸಿ, ಕಾವ್ಯಾ ಆಚಾರ್ ಕಾರ್ಯಕ್ರಮ ನಿರೂಪಿಸಿದರು. ಅಕ್ಷಯ್ ಎಂ.ಜೆ. ವಂದಿಸಿದರು.